RNU AIR DHARWAD

# DECEMBER 31, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಶ್ರೀಹರಿಕೋಟಾದ ಸತೀಶ ಧವನ್ ಬಾಹ್ಯಾಕಾಶ ಕೇಂದ್ರದಿಂದ, ಎರಡು ಇಸ್ರೋ ಉಪಗ್ರಹಗಳ, ಯಶಸ್ವಿ ಉಡಾವಣೆ.
- ರೈತರಿಗೆ ಹಗಲು ಏಳು ಗಂಟೆ ಉಚಿತ ವಿದ್ಯುತ್ ಒದಗಿಸಲು, ರಾಜ್ಯಾದ್ಯಂತ ಸೌರ ಘಟಕಗಳಿಗೆ, ಇಂಧನ ಇಲಾಖೆ ಚಾಲನೆ.
- ಹೊಸ ವರ್ಷ – 2025ರ ಸಂಭ್ರಮಾಚರಣೆ: ಜವಾಬ್ದಾರಿಯಿಂದ ಕೈಗೊಳ್ಳುವಂತೆ, ಜಿ. ಪರಮೇಶ್ವರ, ಕೋರಿಕೆ.
- ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ, ಜನವರಿ 17 ರಿಂದ 23ರ ವರೆಗೆ, ರಾಜ್ಯ ಮಟ್ಟದ ಒಲಿಂಪಿಕ್ಸ್ ಕ್ರೀಡಾಕೂಟ.

<><><>

ಈಗ ವಾರ್ತೆಗಳ ವಿವರ

<><><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ – ಇಸ್ರೋ, ನಿನ್ನೆ ರಾತ್ರಿ 10 ಗಂಟೆಗೆ, ಶ್ರೀಹರಿಕೋಟಾದ ಸತೀಶ ಧವನ್ ಬಾಹ್ಯಾಕಾಶ ಕೇಂದ್ರದಿಂದ, ಎರಡು ಉಪಗ್ರಹಗಳನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ. ಬಾಹ್ಯಾಕಾಶ ನೌಕೆ ಕಕ್ಷೆಯಲ್ಲಿ ಡಾಕಿಂಗ್ ಮತ್ತು ಅನ್‌ಡಾಕಿಂಗ್ ಕಾರ್ಯವನ್ನು ಇಸ್ರೋ ಪ್ರದರ್ಶಿಸಿತು. ಬಾಹ್ಯಾಕಾಶ ಕೇಂದ್ರದಲ್ಲಿ 2 ಬಾಹ್ಯಾಕಾಶ ನೌಕೆಗಳನ್ನು ಜಾಗರೂಕತೆಯಿಂದ ಸಂಯೋಜಿಸಿ, ಅವುಗಳನ್ನು ಒಂದಕ್ಕೊಂದು ಜೋಡಿಸುವ ಪ್ರಕ್ರಿಯೆಯಾಗಿದೆ. ಬಾಹ್ಯಾಕಾಶದಲ್ಲಿ ಸರಕು ಸರಂಜಾಮುಗಳ ಡಾಕಿಂಗ್ ವ್ಯವಸ್ಥೆ ಬಲಪಡಿಸುವ ಉದ್ದೇಶದಿಂದ, ಈ ಕಾರ್ಯಾಚರಣೆಗೆ ಇಸ್ರೋ ಮುಂದಾಗಿದೆ. ಚಂದ್ರನಿಂದ ಕಲ್ಲುಗಳು ಮತ್ತು ಮಣ್ಣನ್ನು ಪಡೆಯುವುದು, ಪ್ರಸ್ತಾವಿತ ಭಾರತೀಯ ಅಂತರಿಕ್ಷ ನಿಲ್ದಾಣ ಮತ್ತು ಚಂದ್ರನ ಮೇಲ್ಮೈಯಲ್ಲಿ ಗಗನಯಾತ್ರಿಯನ್ನು ಇಳಿಸುವುದು ಸೇರಿದಂತೆ, ಬಾಹ್ಯಾಕಾಶ ಸಂಶೋಧನೆಯಲ್ಲಿ ಭಾರತದ ಭವಿ ್ಯದ ಪ್ರಯತ್ನಗಳಿಗೆ ಸ್ಪೇಡೆಕ್ಸ್ ಯೋಜನೆ ಒಂದು ಮಹತ್ವದ ಹೆಜ್ಜೆ ಎಂದು ಪರಿಗಣಿಸಲಾಗಿದೆ.

<><><>

ರೈತರಿಗೆ ಹಗಲು ಹೊತ್ತು, ಏಳು ಗಂಟೆ ಉಚಿತ ವಿದ್ಯುತ್ ಸೌಕರ್ಯ ಒದಗಿಸಲು, ರಾಜ್ಯಾದ್ಯಂತ ಸೌರ ಘಟಕಗಳಿಗೆ ಚಾಲನೆ ನೀಡಲಾಗುವುದು ಎಂದು, ಇಂಧನ ಖಾತೆ ಸಚಿವ, ಕೆ.ಜೆ. ಜಾರ್ಜ್ ತಿಳಿಸಿದ್ದಾರೆ. ಇಂಧನ ಇಲಾಖೆ, ರಾಜ್ಯಾದ್ಯಂತ 154 ಸೌರ ಘಟಕಗಳನ್ನು ಸ್ಥಾಪಿಸಿ, ಸಾವಿರದ 81 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಿ, ಸ್ವಾವಲಂಬನೆ ಸಾಧಿಸಲು, ಸಿದ್ಧತೆ ನಡೆದಿದೆ ಎಂದು, ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲೂಕಿನ, ನೀರಗುಂದ ಗ್ರಾಮದಲ್ಲಿ ಸಚಿವರು ಹೇಳಿದರು. ನೀರಗುಂದದ ನಾಲ್ಕು ಎಕರೆ ಪ್ರದೇಶದಲ್ಲಿ, "ಕುಸುಮ್-ಸಿ" ಯೋಜನೆಯಡಿ, ಖಾಸಗಿ ಸಹಭಾಗಿತ್ವದಲ್ಲಿ ಮೂರು ಮೆಗಾವ್ಯಾಟ್ ಸಾಮರ್ಥ್ಯದ, ಸೌರ ಘಟಕವನ್ನು ಸಿದ್ಧ ಪಡಿಸಲಾಗುತ್ತಿದೆ ಎಂದರು. ಚಿತ್ರದುರ್ಗ ಜಿಲ್ಲೆಯ ಆರೂ ತಾಲೂಕುಗಳಲ್ಲಿ, ಒಂಬತ್ತು ಸೌರ ವಿದ್ಯುತ್ ಉತ್ಪಾದನಾ ಘಟಕಗಳು ಸ್ಥಾಪನೆಯಾಗಲಿವೆ. ಅರವತ್ತೆರಡು ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು, ಯೋಜಿಸಲಾಗಿದೆ ಎಂದು, ಸಚಿವ ಜಾರ್ಜ್ ನುಡಿದರು. ಬಳಿಕ, ತುಮಕೂರು ಜಿಲ್ಲೆ, ಶಿರಾ ತಾಲೂಕು, ಚಂಗಾವರದ ಸೌರ ವಿದ್ಯುತ್ ಘಟಕಕ್ಕೆ ಸಚಿವರು ಭೇಟಿ ನೀಡಿದರು.

<><><>

ಉತ್ತರ ಕರ್ನಾಟಕದ ಬಯಲು ಸೀಮೆಯ ಮಳೆ ಆಶ್ರಿತ ಕೃಷಿ ಭೂಮಿಯಲ್ಲಿ, ಬರಗಾಲವನ್ನು ಎದುರಿಸಿ ನಿಲ್ಲುವ ಸಾಮರ್ಥ್ಯ ಹೊಂದಿರುವ, ಗೆಡ್ಡೆ-ಗೆಣಸುಗಳನ್ನು ಹೆಚ್ಚು ಶ್ರಮವಿಲ್ಲದೆ ಬೆಳೆದುಕೊಳ್ಳಲು, ಪ್ರಯೋಗಶೀಲ ರೈತರನ್ನು, ಅಣಿಗೊಳಿಸಲಾಗುತ್ತಿದೆ. ಕೋಲ್ಕೋತ್ತಾದ ಕ್ರಾಪ್ಸ್ 4 ಎಚ್.ಡಿ. ಹಾಗೂ ಮೈಸೂರಿನ ಸಹಜ ಸಮೃದ್ಧ ಮತ್ತು ಧಾರವಾಡದ ಗೆಡ್ಡೆ-ಗೆಣಸು ಸಂಶೋಧನಾ ಕೇಂದ್ರ, ಪೌಷ್ಟಿಕಾಂಶಯುಕ್ತ ಗೆಡ್ಡೆ-ಗೆಣಸುಗಳನ್ನು, ದೈನಂದಿನ ಆಹಾರದ ಭಾಗವಾಗಿಸಲು ಗೃಹಿಣಿಯರಿಗೆ ವಿಶೇಷ ಖಾದ್ಯಗಳನ್ನು ತಯಾರಿಸುವ ಬಗ್ಗೆ, ತರಬೇತಿ ಸಹ ನೀಡುತ್ತಿವೆ. ಗೆಡ್ಡೆ, ಗೆಣಸು ಖಾದ್ಯ ಪ್ರವೀಣೆ, ಧಾರವಾಡದ ಮಾಲತಿ ಹೆಗಡೆ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಮಾಲತಿ ಹೆಗಡೆ ಧ್ವನಿ 45 ಸೆಕೆಂದುಗಳು

<><><>

ಉತ್ತರಕನ್ನಡ ಜಿಲ್ಲೆ ಯಲ್ಲಾಪುರ ಮತ್ತು ಶಿರಸಿ ತಾಲೂಕುಗಳ ವ್ಯಾಪ್ತಿಯ, ಬೇಡ್ತಿ ಹಾಗೂ ಶಾಲ್ಮಲಾ ನದಿಗಳಿಗೆ, ಅಡ್ಡಲಾಗಿ ಅಣೆಕಟ್ಟುಗಳ ನಿರ್ಮಾಣ ಹಾಗೂ ವರದಾ ನದಿಗೆ ನೀರು ಕೊಂಡೊಯ್ಯುವ ತಿರುವು ಯೋಜನೆಗಳನ್ನು ಜಾರಿಗೊಳಿಸದಂತೆ, ಯಲ್ಲಾಪುರ ತಾಲೂಕಿನ ಪರಿಸರ ಅರಣ್ಯ ಜೀವವೈವಿಧ್ಯ ಕಾರ್ಯಕರ್ತರು ಹಾಗೂ ಸಂಘ-ಸಂಸ್ಥೆಗಳ ಪ್ರಮುಖರು ಒತ್ತಾಯಿಸಿದ್ದಾರೆ. ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಅವರಿಗೆ, ಪಶ್ಚಿಮ ಘಟ್ಟ ಕಾರ್ಯಪಡೆಯ ನಿಕಟಪೂರ್ವ ಅಧ್ಯಕ್ಷ, ಅನಂತ ಹೆಗಡೆ ಅಶಿಸರ ನೇತೃತ್ವದಲ್ಲಿ, ಬೆಂಗಳೂರಿನಲ್ಲಿ ನಿಯೋಗ, ಮನವಿ ಸಲ್ಲಿಸಿದೆ. ಬೇಡ್ತಿ, ವರದಾ ನದಿ ಜೋಡಣೆ ಯೋಜನೆ ಪ್ರಸ್ತಾವಕ್ಕೆ ಸಂಬಂಧಿಸಿ, ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಗೌರವಾಧ್ಯಕ್ಷ, ಸೋಂದಾ ಸ್ವರ್ಣವಲ್ಲಿ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ, ಗಂಭೀರ ಹೆಜ್ಜೆಗಳನ್ನು ಇಡಲು ತೀರ್ಮಾನಿಸುವುದಾಗಿ, ನಿಯೋಗ ಮನವಿಯಲ್ಲಿ ತಿಳಿಸಿದೆ.

<><><>

ಈಗ ಜಾಹಿರಾತು..

ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

**(10 ಸೆಕೆಂದುಗಳು ದಿನದರ್ಶಿಕೆ)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಹೊಸ ವರ್ಷ 2025ನ್ನು ಸ್ವಾಗತಿಸಲು, ಇನ್ನು ಕೆಲವೇ ಗಂಟೆಗಳು ಬಾಕಿ ಇವೆ. ಇಂದಿಗೆ ಕಳೆದು ಹೋಗಲಿರುವ 2024ನೇ ವರ್ಷದ, ಇಡೀ ವಾರ್ಷಿಕ ವಿದ್ಯಮಾನಗಳನ್ನು ಒಳಗೊಂಡ, ವಾರ್ತಾ ಸಂಚಿಕೆ, 'ಕಾಲಚಕ್ರ' ಇಂದು ರಾತ್ರಿ 7.45 ರಿಂದ 8.45ರ ವರೆಗೆ ಪ್ರಸಾರವಾಗಲಿದೆ. ಬೆಂಗಳೂರು ಆಕಾಶವಾಣಿಯ ಪ್ರಾದೇಶಿಕ ಸುದ್ದಿ ವಿಭಾಗ, ಈ ಕಾರ್ಯಕ್ರಮವನ್ನು ಪ್ರಸ್ತುತ ಪಡಿಸಲಿದೆ.

<><><>

ಹೊಸ ವರ್ಷ – 2025ರ ಸಂಭ್ರಮಾಚರಣೆಯನ್ನು, ಇಂದು ಮತ್ತು ನಾಳೆ, ಜವಾಬ್ದಾರಿಯಿಂದ ಕೈಗೊಳ್ಳುವಂತೆ, ಗೃಹ ಖಾತೆ ಸಚಿವ ಜಿ. ಪರಮೇಶ್ವರ ಕೋರಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂಭ್ರಮ ಸೂತಕವಾಗಿ ಪರಿಣಮಿಸಬಾರದು. ಕಾನೂನು, ಸುವ್ಯವಸ್ಥೆಗೆ ಭಂಗತರಬಾರದು. ಆಯಕಟ್ಟಿನ ಸ್ಥಳಗಳಲ್ಲಿ ಕ್ಯಾಮೆರಾ ಅಳವಡಿಸಲಾಗಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ ಎಂದರು.

<><><>

ಕಲಬುರಗಿಯ ಗುತ್ತಿಗೆದಾರ ಸಚಿನ ಅವರ ಆತ್ಮಹತ್ಯೆ ಪ್ರಕರಣವನ್ನು, ಸಿ.ಐ.ಡಿ. ತನಿಖೆಗೆ ಒಪ್ಪಿಸಲಾಗಿದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಿ, ನೊಂದವರಿಗೆ ನ್ಯಾಯ ಸಿಗಬೇಕಿದೆ ಎಂದು, ಅವರು ಹೇಳಿದರು.

<><><>

ನಾಳೆ, 2025ರ ಜನವರಿ 1 ರಿಂದ ಜಾರಿಗೆ ಬರುವಂತೆ, ನೈಋತ್ಯ ರೇಲ್ವೆ ವ್ಯಾಪ್ತಿಯ ವಿವಿಧ ರೈಲುಗಳ ಆಗಮನ ಮತ್ತು ನಿರ್ಗಮನದ ಸಮಯವನ್ನು ಪರಿ ್ಕರಿಸಲಾಗಿದೆ ಎಂದು, ರೇಲ್ವೆ ಇಲಾಖೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ **swr.indianrailways.gov.in** ಜಾಲತಾಣಕ್ಕೆ ಭೇಟಿ ನೀಡಿ ಅಥವಾ ರೇಲ್ವೆ ಸಹಾಯವಾಣಿ 139ಕ್ಕೆ ಕರೆ ಮಾಡಿ, ಮಾಹಿತಿ ಪಡೆಯಬಹುದು.

<><><>

ಧಾರವಾಡದಿಂದ 11 ಕಿಲೋ ಮೀಟರ್ ದೂರದಲ್ಲಿರುವ, ಅಮ್ಮಿನಬಾವಿಯ, ಪಂಚಗ್ರಹ ಹಿರೇಮಠದಲ್ಲಿ, ತಾರಸಿಗೆ ವಿಶೇಷವಾದ ಧಾರ್ಮಿಕ ಹಾಗೂ ಪೌರಾಣಿಕ ವರ್ಣ ಚಿತ್ರಗಳನ್ನು ಬಿಡಿಸಲಾಗಿದೆ. ಕಿತ್ತೂರಿನ ವೀರರಾಣಿ ಚನ್ನಮ್ಮನವರು ಅಂಬಾರಿಯಲ್ಲಿ ಕುಳಿತ ದೃಶ್ಯ, ಸಂಗೊಳ್ಳಿ ರಾಯಣ್ಣನವರನ್ನು ಬ್ರಿಟಿಷರು ಬಂಧಿಸಿದ ಮತ್ತು ಗಲ್ಲಿಗೇರಿಸಿದ ಚಿತ್ರಗಳು ವಿಶೇಷವಾಗಿವೆ. 200 ವರ್ಷಗಳಿಗೂ ಹಳೆಯದಾದ ಈ ವಿಶಿಷ್ಟ ವರ್ಣಚಿತ್ರಗಳ ಬಗ್ಗೆ, ಕಳೆದ ಹಲವಾರು ವರ್ಷಗಳಿಂದ ಅಧ್ಯಯನ ನಿರತರಾಗಿರುವ, ಧಾರವಾಡದ ಹಿರಿಯ ಕಲಾವಿದ ಎಫ್.ವಿ.ಚಿಕ್ಕಮಠ, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಎಫ್.ವಿ.ಚಿಕ್ಕಮಠ ಧ್ವನಿ 40 ಸೆಕೆಂದುಗಳು

<><><>

ರಾಜ್ಯ ಒಲಿಂಪಿಕ್ಸ್ ಅಸೋಸಿಯೇಶನ್ ಆಶ್ರಯದಲ್ಲಿ, ಜನವರಿ 17 ರಿಂದ 23ರ ವರೆಗೆ, ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ, ರಾಜ್ಯ ಮಟ್ಟದ ಒಲಿಂಪಿಕ್ಸ್ ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು, ದಕ್ಷಿಣಕನ್ನಡ ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಕ್ಷಿಣಕನ್ನಡ ಜಿಲ್ಲೆಯ ವಿವಿಧೆಡೆ, 12 ವಿಧದ ಕ್ರೀಡೆಗಳು ಹಾಗೂ ಉಡುಪಿ ಜಿಲ್ಲೆಯಲ್ಲಿ, 11 ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿದೆ. ಹಿರಿಯ ಅಥ್ಲೀಟ್‌ಗಳು ಸೇರಿದಂತೆ, ನಾಲ್ಕು ಸಾವಿರಕ್ಕೂ ಅಧಿಕ ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

<><><>

ಕರಾವಳಿ ಉತ್ಸವದ ಅಂಗವಾಗಿ, ಮಂಗಳೂರಿನ ಕದ್ರಿ ಉದ್ಯಾನದಲ್ಲಿ ರೋಬೋಟಿಕ್ ಬಟರ್ ಫ್ಲೈ ಪ್ರದರ್ಶನ ಗಮನ ಸೆಳೆದಿದೆ. ಜನವರಿ 2 ಮತ್ತು 3 ರಂದು, ಚಲನಚಿತ್ರೋತ್ಸವ, 4 ಮತ್ತು 5 ರಂದು ಯುವ ಮನ ಕಾರ್ಯಕ್ರಮ ಹಾಗೂ ಶ್ವಾನ ಪ್ರದರ್ಶನ, ಏರ್ಪಡಿಸಲಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕ ಒಳಗೊಂಡ, ಉತ್ತರ ಕರ್ನಾಟಕ ಭಾಗದಲ್ಲಿ, ರೈತಾಪಿ ವರ್ಗ ಎಳ್ಳು ಅಮಾವಾಸ್ಯೆಯನ್ನು, ಚೆರಗ ಚೆಲ್ಲಿ, ಎತ್ತುಗಳನ್ನು ಸಿಂಗರಿಸಿ, ಬನ್ನಿ ಮರಕ್ಕೆ ಪೂಜೆ ಮಾಡಿ, ನೈವೇದ್ಯ ಅರ್ಪಿಸಿ, ಸಂಭ್ರಮದಿಂದ ಆಚರಿಸಿದರು.

<><><>

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ, ಹೊಸ ವರ್ಷ 2025ರ ಮೊದಲ ದಿನವಾದ ನಾಳೆ, ಬೆಳಗ್ಗೆ 6:30 ರಿಂದ, ದೇವಿ ಚಾಮುಂಡೇಶ್ವರಿ ದರ್ಶನಕ್ಕೆ, ತಾವರೆ ಕೆರೆ ಗೇಟ್ ತೆರೆದಿರಲಿದೆ ಎಂದು, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಶ್ರೀಹರಿಕೋಟಾದ ಸತೀಶ ಧವನ್ ಬಾಹ್ಯಾಕಾಶ ಕೇಂದ್ರದಿಂದ, ಎರಡು ಇಸ್ರೋ ಉಪಗ್ರಹಗಳ, ಯಶಸ್ವಿ ಉಡಾವಣೆ.

- ರೈತರಿಗೆ ಹಗಲು ಏಳು ಗಂಟೆ ಉಚಿತ ವಿದ್ಯುತ್ ಒದಗಿಸಲು, ರಾಜ್ಯಾದ್ಯಂತ ಸೌರ ಘಟಕಗಳಿಗೆ, ಇಂಧನ ಇಲಾಖೆ ಚಾಲನೆ.

- ಹೊಸ ವರ್ಷ – 2025ರ ಸಂಭ್ರಮಾಚರಣೆ; ಜವಾಬ್ದಾರಿಯಿಂದ ಕೈಗೊಳ್ಳುವಂತೆ, ಜಿ. ಪರಮೇಶ್ವರ, ಕೋರಿಕೆ.

- ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ, ಜನವರಿ 17 ರಿಂದ 23ರ ವರೆಗೆ, ರಾಜ್ಯ ಮಟ್ಟದ ಒಲಿಂಪಿಕ್ಸ್ ಕ್ರೀಡಾಕೂಟ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>